ಇಲ್ಲಿಗೆ ತಲುಪಿ ಶಿವರಾಮ ಇವರ ನಿರೀಕ್ಷೆಯಲ್ಲಿದ್ದ. 'ಆರತಿ ಮಾಡಿ ಒಳಗೆ ಕರ್ಕಂತಾರೆ. ಸೀದಾ ಒಳಗೆ ನುಗ್ಗಬೇಡ' ಎಂದು ಅಮ್ಮ ಮೊದಲೇ ಹೇಳಿಟ್ಟಿದ್ದರಿಂದ ಅಮ್ಮನ ಕೈಲಿದ್ದ ಮಗುವನ್ನು ತಾನು ಎತ್ತಿಕೊಂಡು ನಿರೀಕ್ಷೆಯ ಕಣ್ಣುಗಳಿಂದ ಒಳಗೆ ನೋಡಿದಳು ಸೀತಾಲಕ್ಷ್ಮಿ. ಯಾರದ್ದೂ ಸುಳಿವಿಲ್ಲ. ಪೆಚ್ಚಾಯ್ತು ಹುಡುಗಿಗೆ.

'ಯಾಕೆ ಅಲ್ಲೇ ನಿಂತಿದೀಯೇ? ಬಾ ಒಳಗೆ...' ಹೇಳಿದ ಶಿವರಾಮ. ಅಮ್ಮನ ಮುಖ ನೋಡಿದಳು ಸೀತಾಲಕ್ಷ್ಮಿ. ಅಳಿಯನ ಕಡೆ ತಲೆಯೆತ್ತಿ ನೋಡದೆ ನೆಲ ನೋಡುತ್ತಾ ಉತ್ತರಿಸಿದರು ಅತ್ತೆಮ್ಮ,

'ಕದಲಾರತಿ ಮಾಡ್ಬೇಕಿತ್ತು. ಮೊದಲುಮುಂಚೆ ಮಗು ಮನೆಗೆ ಬರ್ತಿದೆ'.

'ಓ' ಅಂದ ಶಿವರಾಮ. ಇದೆಲ್ಲಾ ಶಾಸ್ತ್ರ ಅವನಿಗೆ ಗೊತ್ತಿಲ್ಲ.

'ನೀವೇ ಒಳಗೆ ಬಂದು ಆರತಿ ಮಾಡ್ಬೇಕು. ಮನೇಲಿ ಮತ್ತ್ಯಾರಿಲ್ಲ' ಎನ್ನುವ ಮಾತು ಅವನ ಬಾಯಿಂದ ಬಂದಿದ್ದೇ ಚಕಿತಗೊಂಡಳು ಸೀತಾಲಕ್ಷ್ಮಿ. ತಾನು ಬರುವ ಸುದ್ದಿ ತಲುಪಿಸಿದ್ದರೂ ಎಲ್ಲಾ ಎಲ್ಲಿಗೆ ಎದ್ದರು? ಏನೋ ಅನುಮಾನದಿಂದ ಗಂಡನ ಮುಖ ನೋಡಿದರೆ 'ಆಮೇಲೆ ಹೇಳ್ತೀನಿ..' ಎನ್ನುವಂತೆ ಸನ್ನೆ ಮಾಡಿದ ಶಿವರಾಮ. ಸೀತಾಲಕ್ಷ್ಮಿಯ ಅಮ್ಮ ಒಳಗೆ ದಾಟಿ ಬಚ್ಚಲು ಹೊಕ್ಕು ಕೈಕಾಲು ತೊಳೆದು ದೇವರಮನೆಯಲ್ಲಿದ್ದ ಸಣ್ಣ ತಟ್ಟೆಯಲ್ಲಿ ಕುಂಕುಮದ ನೀರು ಮಾಡಿ ತಂದು ಆರತಿ ಮಾಡಿದ ಮೇಲೆ ತನ್ನ ಹಕ್ಕಿನ ಮನೆಯೊಳಗೆ ಕಾಲಿಟ್ಟಳು ಸೀತಾಲಕ್ಷ್ಮಿ. ಎದೆಯೊಳಗೆ ಅವಲಕ್ಕಿ ಭತ್ತ ಕುಟ್ಟುತ್ತಿದೆ. ಏನೋ ಆಗಬಾರದ್ದು ಆಗಿದೆ ಎನ್ನುವುದು ಅರ್ಥವಾಗುತ್ತಿದೆ. ಹಬ್ಬದಡುಗೆಯ ನಿರೀಕ್ಷೆಯಲ್ಲಿದ್ದವರು ಅಡುಗೆಮನೆಗೆ ಬಂದರೆ ಒಲೆಯೊಳಗೆ ಬೆಕ್ಕು ಮಲಗಿದೆ. ಹಿಂದೆಯೇ ಬಂದ ಶಿವರಾಮ,

'ನಾಕು ಜನಕ್ಕೆ ಅಡುಗೆ ಮಾಡೋಕೆ ನಂಗೆ ಅಂದಾಜಾಗಲ್ಲ ಕಣೇ. ಒಂದು ಗಂಜಿ ಬೇಯಿಸ್ಕಂಡು ತುಪ್ಪ, ಉಪ್ಪಿನಕಾಯಿ ಹಾಕ್ಕಂಡು ತಿಂತಿದ್ದೆ...' ಇನ್ನೇನೂ ಹೇಳಬೇಕಾಗಿರಲಿಲ್ಲ ಗಂಡ. ಎಲ್ಲಾ ಅರ್ಥವಾಗಿತ್ತು. ಬಿಸುಸುಯ್ಲು ಎದೆ ಸೀಳಿ ಹೊರಹೊಮ್ಮುತ್ತಿತ್ತು.

ಅಮ್ಮ, ಮಗಳು ಸೇರಿ ಒಂದು ಅನ್ನ, ಹುಳಿ ಮಾಡಿಟ್ಟರು. ಅಷ್ಟರಲ್ಲಿ ಶಿವರಾಮ ಮಲಗುವ ಕೋಣೆಯಲ್ಲಿ ತೊಟ್ಟಿಲು ಕಟ್ಟಿಟ್ಟಿದ್ದ. ಮಲಗಿ ಅಭ್ಯಾಸವಾಗಿದ್ದ ತೊಟ್ಟಿಲಿನಲ್ಲಿ, ಅಭ್ಯಾಸವಾಗಿದ್ದ ಕತ್ತಲುಕೋಣೆಯಲ್ಲಿ, ಮಗು ಸುಖವಾಗಿ ಮಲಗಿ ನಿದ್ದೆ ಹೋಗಿತ್ತು.

ಮರುದಿನ ಮಧ್ಯಾಹ್ನದ ಬಸ್ಸಿಗೆ ಅಮ್ಮ, ಅಣ್ಣ ಹೊರಡುವವರೆಗೆ ಸೀತಾಲಕ್ಷ್ಮಿ ಗಂಡನನ್ನು ಕೆದಕಲು ಹೋಗಲಿಲ್ಲ. ರಾತ್ರಿ ಕೋಣೆಯೊಳಗೆ ಅವನು ಮಲಗಲು ಬಂದಾಗ ಯಾವುದೋ ಬೇಡದ ಪುರಾಣ ತೆಗೆದು ಮನಸ್ಸು ಕೆಡಿಸಿಕೊಳ್ಳಲು ತಿಂಗಳಾನುಗಟ್ಟಲೆಯ ವಿರಹ ಆಸ್ಪದ ಕೊಡಲಿಲ್ಲ. ಯಾಕೆ ಹೀಗಾಯ್ತು? ಎನ್ನುವುದಷ್ಟೇ ಅವಳಿಗೆ ಗೊತ್ತಾಗಬೇಕಾದದ್ದು.

* * *

ಶಿವರಾಮ ತನ್ನನ್ನು ಒಪ್ಪಿಟ್ಟುಕೊಳ್ಳುವಂತೆ ಹೇಳಿದ ಪುರಾಣವನ್ನು ಪೂರ್ತಿ ನಂಬಲಿಲ್ಲ ಸೀತಾಲಕ್ಷ್ಮಿ. ಪೂರ್ತಿ ತಳ್ಳಿ ಹಾಕಲೂ ಇಲ್ಲ. ಎಲ್ಲಾ ಅವರವರ ಮೂಗಿನ ನೇರಕ್ಕೆ ಮಾತಾಡುತ್ತಾರೇ ವಿನಾ ತಮ್ಮಿಂದ ತಪ್ಪಾಗಿದೆಯೆಂದು ಯಾರು ಒಪ್ಪಿಕೊಳ್ಳುತ್ತಾರೆ? ಬಾವ, ನಾದಿನಿಯ ನಡುವಿನ ಕಟಿಪಿಟಿ ದಿನ ಕಳೆದಂತೆ ಹೆಚ್ಚಾಗುತ್ತಾ ಬಂತು. ಶಿವರಾಮನಿಗೆ ಎಲ್ಲಾ ಸಮಯಕ್ಕೆ ಸರಿಯಾಗಿ ಆಗಿಬಿಡಬೇಕು. ಹಾಗೆ ಸೇವೆ ಮಾಡಿ ಮಾಡಿ ಕಲಿಸಿಟ್ಟಿದ್ದರು ಅಮ್ಮ. ಕಲಿಸಿಟ್ಟಿದ್ದಳು ಹೆಂಡತಿ. ಬೆಳಗಾದ ಮೇಲೆ ಆಕಳಿಸುತ್ತಾ ನಾದಿನಿ ಎದ್ದು ಬರುವುದನ್ನು ಕಂಡರೆ ಮೈ ಉರಿ ಹತ್ತುತ್ತಿತ್ತು ಶಿವರಾಮನಿಗೆ. ಬೆಳಿಗ್ಗೆ ಎದ್ದು ಮುಖ ತೊಳೆದ ಕೂಡಲೆ ಒಂದು ದೊಡ್ಡ ಲೋಟ ಭರ್ತಿ ಕಾಫಿ ಹೊಟ್ಟೆಗೆ ಬೀಳಬೇಕು. ಆಮೇಲೇ ಗಾಡಿ ಚುರುಕಾಗುವುದು. ಕನಕನಿಗೆ ಚುರುಕು ಅಂದರೆ ಏನೆಂದೇ ಗೊತ್ತಿಲ್ಲ. ಅವಳು ಕಾಫಿ ತಪ್ಪಲೆ ಒಲೆಯ ಮೇಲೇರಿಸಿ ಕಾಫಿ ಕುದಿಸುವಷ್ಟರಲ್ಲಿ ಶಿವರಾಮನ ಸಹನೆ ಸೋರಿ ಹೋಗಿರುತ್ತಿತ್ತು. ಜೀವ ಭಾರವಾದವರಂತೆ ಮೂಲೆ ಸೇರಿಕೊಂಡಿದ್ದ ವೆಂಕಮ್ಮನ ಮೇಲೆ ಸಿಟ್ಟು ಬರುತ್ತಿತ್ತು. ಬೇರೇನೂ ಬೇಡ. ಒಂದು ಕಾಫಿ ಮಾಡಿಡುವಷ್ಟು ಕೈಲಿ ಹರಿಯುವುದಿಲ್ಲವಾ? ಬೇಕೆಂದೇ ಅಮ್ಮ ವೇಷ ಕಟ್ಟುತ್ತಿದ್ದಾಳೆ ಅನಿಸುತ್ತಿತ್ತು. ಒಂದು ದಿನ ಅಮ್ಮನಿಗೆ ನೇರವಾಗಿ ಹೇಳಿದ ಶಿವರಾಮ,

'ಬೇರೇನೂ ಮಾಡ್ಬೇಡ್ವೇ ಪುಣ್ಯಾತ್ಗಿತ್ತಿ. ಬೆಳಿಗ್ಗೆ ಬೇಗ ಎದ್ದು ಕಾಫಿ ಕಾಸಿಡು ಸಾಕು...'

'ರಾತ್ರಿಡೀ ನಿದ್ದೆ ಬರಲ್ಲ ಕಣೋ. ಬೆಳಗಿನ ಜಾಮದ ಹೊತ್ತಿಗೆ ತೂಕಡಿಕೆ ಬಂದ್ಬಿಡುತ್ತೆ. ನನ್ನ ನಂಬ್ಕಂಬೇಡ ನೀನು, ಮುಗೀತು ನನ್ನ ಕಾಲ...'

ಅಮ್ಮ, ಮಗನ ನಡುವೆ ಕನಕ ಮೂಗು ತೂರಿಸಿದಳು,

'ಅಷ್ಟಿದ್ದೋರು ತಾವೇ ಕಾಫಿ ಮಾಡ್ಕಂಬೇಕಪ್ಪಾ. ವಯಸ್ಸಾದೋರಿಗೆ ಯಾಕೆ ತೊಂದರೆ ಕೊಡ್ಬೇಕು?'

'ನಿನ್ನತ್ರ ಹೇಳಿದ್ದಲ್ಲ...' ಅಂದನಂತೆ ಶಿವರಾಮ.

'ನನ್ಮೇಲೇ ಪುಕಾರು ಮಾಡ್ತಿರೋದು. ಅಷ್ಟೂ ಗೊತ್ತಾಗಲ್ವಾ ನಂಗೆ? ನಾನೇನು ಬೆಟ್ಟು ಚೀಪೋ ಮಗು ಅಲ್ಲ.'

ಶಿವರಾಮ ಹೇಳಿದ್ದನ್ನು ನಂಬಬಹುದಾದರೆ ಅಲ್ಲಿಗೆ ಅವನು ಆ ವಿಷಯ ಕೈದು ಮಾಡಿದ. ಕೊಚ್ಚೆ ಮೇಲೆ ಕಲ್ಲು ಎಸೆದರೆ, ಆಕಾಶಕ್ಕೆ ಮಕ ಮಾಡಿ ಉಗಿದರೆ ನಮ್ಮ ಮೈಗೇ ಬೀಳುವುದು ಎನ್ನುವ ಅವನ ಮಾತು ಕೇಳಿ ಕಣ್ಣರಳಿಸಿದ್ದಳು ಸೀತಾಲಕ್ಷ್ಮಿ. ಗಂಡನಿಗೆ ಇಷ್ಟು ಒಳ್ಳೆಯ ಬುದ್ಧಿ ಬಂದಿದ್ದು ಹೇಗಪ್ಪಾ, ತನ್ನ ಮಾತಿಗೆ ಪ್ರತಿ ಹೇಳಿದವರನ್ನು ಹಾಗೇ ಬಿಟ್ಟುಬಿಡುವಷ್ಟು? ಎಂದು ಅವಳಿಗೆ ಸಹಜವಾಗಿಯೇ ಅನಿಸಿತ್ತು. ವಿರೋಧದ ಮಾತನ್ನು ಕೇಳಿ ಅಭ್ಯಾಸವೇ ಇಲ್ಲದವನು ಶಿವರಾಮ. ಅದರಲ್ಲೂ ಮನೆಯೊಳಗಿನ ವ್ಯವಹಾರದಲ್ಲಿ ಅವನು ಹೇಳಿದ್ದೇ ಶಾಸನ. ಅವನು ನುಡಿದಿದ್ದೇ ವೇದವಾಕ್ಯ.

ಉಮಿಗುಡ್ಡೆಯೊಳಗೆ ಬಿದ್ದ ಕಿಡಿ ಒಳಗಿಂದೊಳಗೆ ನಿಧಾನವಾಗಿ ಅದನ್ನು ಸುಟ್ಟು ಬೂದಿ ಮಾಡುವಂತೆ ಮನೆಯೊಳಗೆ ಹತ್ತಿಕೊಂಡ ಕಿಡಿ ಮನೆಯ ನೆಮ್ಮದಿಯನ್ನು ಸುಡುತ್ತಾ ಬಂತು. ದಿನಾ ಒಂದಿಲ್ಲೊಂದು ರಗಳೆ. ರಗಳೆಗೆ ಒಂದು ನೆಪ. ಹಣಕಾಸಿನ ಕೊರತೆ ಕಾಡದಿದ್ದರೂ ಆ ಮನೆಯಲ್ಲಿ ಒಂದು ಅಚ್ಚುಕಟ್ಟುತನ ಇತ್ತು. ಯಾವುದನ್ನೂ ಅತಿಯಾಗಿ ಮಾಡಿ ಕಲಗಚ್ಚಿನ ಬಾನಿಗೋ, ಮುರುವಿನ ಹಂಡೆಗೋ ಸುರಿಯುವ ಪದ್ಧತಿ ಇರಲಿಲ್ಲ. ಕನಕನಿಗೆ ಕಣ್ಣಂದಾಜು, ಕೈಯಂದಾಜು ಅಂದರೆ ಏನೆಂದು ಗೊತ್ತಿಲ್ಲ. ಮಾಡಿದ್ದು ಉಳಿದು ಹೋದರೆ ವ್ಯರ್ಥವಾಯಿತೆಂಬ ಹಳಹಳಿ ಇಲ್ಲ. ಮನೆಯಲ್ಲಿ ಬೆಳೆದಿದ್ದಾದರೆ ಒಂದು ಲೆಕ್ಕದಲ್ಲಿ ಒಪ್ಪಬಹುದು. ಆದರೆ ಅಂಗಡಿಯಿಂದ ಕೊಂಡು ತಂದಿದ್ದರಲ್ಲೂ ಮಿತ ಬಳಕೆ ಗೊತ್ತಿಲ್ಲ.

'ಬಟ್ಟೆ ಸೋಪು ಖರ್ಚಾಗಿದೆ' ಅಂದಳು ಒಂದು ದಿನ. ಅಂಗಡಿ ಸಾಮಾನು, ದುಡ್ಡಿನ ವ್ಯವಹಾರ, ಜನಿವಾರದ ಬೀಗದಕೈ ಎಲ್ಲವೂ ಶಿವರಾಮನ ಕೈಯಲ್ಲಿ. ಹಜಾಮತ್ತಿನ ದುಡ್ಡಿಗೆ ಸೈತಾ ಅವನೆದುರು ಕೈಚಾಚಬೇಕು ವೆಂಕಟರಾಮ. ನಾಪಿತ ಮನೆಗೇ ಬಂದು ಕ್ಷೌರಕರ್ಮ ಮಾಡುತ್ತಿದ್ದುದರಿಂದ, ವೆಂಕಮ್ಮನಿಗೂ ಈ ಸೇವೆ ಅಗತ್ಯವಿದ್ದುದರಿಂದ ಕೈಯಲ್ಲಿ ದುಡ್ಡು ಬೇಕು ಎನ್ನುವ ಪರಿಸ್ಥಿತಿ ವೆಂಕಟರಾಮುವಿಗೆ ಬಂದಿರಲಿಲ್ಲ. ಕೇಳಿದರೆ ಅಣ್ಣ ಕೊಡುತ್ತಾನೆ ಎನ್ನುವುದು ಅವನಿಗೆ ಗೊತ್ತುಂಟು. ಈ ವ್ಯವಸ್ಥೆ ಕನಕನ ಕಣ್ಣಲ್ಲಿ ಕೀಳರಿಮೆಯಾಗಿ ಕಾಡುತ್ತಿತ್ತು. 'ಹೆಂಡತಿ ಒಂದು ಕುಪ್ಪಸ ಹೊಲಿಸ್ಕೋಬೇಕಾದ್ರೂ ಅಣ್ಣನ ಮುಂದೆ ಕೈ ಒಡ್ಬೇಕಲ್ರೀ? ಅಡಿಕೆ ಮಾರಾಟದ ದುಡ್ಡನ್ನು ಏನು ಮಾಡ್ತಾರಂತೆ? ಇಂತಿಷ್ಟು ಬಂತು, ಇಂತಿಷ್ಟು ಖರ್ಚಾಯ್ತು ಅಂತ ಯಾವತ್ತಾರೂ ಲೆಕ್ಕ ಕೊಟ್ಟಿದಾರಾ? ನೀವು ಕೇಳಿದೀರಾ? ಇಷ್ಟು ಪೆದ್ದು ಅಂತಾದ್ರೆ ಸಮಾ ನಾಮ ಹಾಕ್ತಾರೆ, ನೋಡ್ತಿರಿ...' ಅಂದಿದ್ದಳಂತೆ.

'ಸುಮ್ನಿರೇ, ಇಷ್ಟೊರ್ಷ ಹಿಂಗೇ ನಡ್ಕೊಂಬಂದಿದೆ. ಏನು ಅರೆ ಆಯ್ತು ನಮಗೆ? ಗಟ್ಟಿ ಕೇಳಿದ್ರೆ ಯಾವ ತಲೆಬಿಸೀನೂ ಇಲ್ಲ...'

'ದುಡ್ಡು ಕೈಲಿದ್ರೆ ತಲೆಬಿಸಿ ಅಂತೀರಲ್ರೀ? ಯಾವ ಜಾತಿ ಮನುಷ್ರು ನೀವು? ಜನ್ಮಿಡೀ ಹಿಂಗೇ ಇದ್ಬಿಡೋಕಾಗುತ್ತಾ? ಭವಿಷ್ಯಾನೂ ನೋಡ್ಬೇಕಲ್ವಾ?' ಬೋಧನೆ ನಿಧಾನವಾಗಿ ಪರಿಣಾಮಕಾರಿಯಾಗತೊಡಗಿತ್ತು. ಕೆಲಸಕ್ಕೆ ನಾನು, ಯಜಮಾನಿಕೆಗೆ ಅಣ್ಣ ಎನ್ನುವ ಹುಳು ವೆಂಕಟರಾಮನ ತಲೆ ಹೊಕ್ಕಿತ್ತು. ಇವೆಲ್ಲಾ ಗಂಡ ಕಲ್ಪಿಸಿಕೊಂಡು ಹೇಳುತ್ತಿದ್ದಾನೋ ಅಥವಾ ಏನಾದರೂ ಆಧಾರ ಸಿಕ್ಕಿತ್ತೋ ಸೀತಾಲಕ್ಷ್ಮಿಗೆ ಗೊತ್ತಾಗಿರಲಿಲ್ಲ. ಅಷ್ಟಿಷ್ಟು ನಿಜವೂ ಇರಬಹುದು. ಕನಕನ ಸ್ವಭಾವ ನೋಡಿದ್ದಾಳಲ್ಲ ಸೀತಾಲಕ್ಷ್ಮಿ? ಶಿವರಾಮ ಒಂದು ಥರ ಆದರೆ ಅದು ಮತ್ತೊಂದು ಜಾತಿಯ ಹೆಣ್ಣು. ತನ್ನ ಮಾತು ನಡೆಯಬೇಕು ಎನ್ನುವ ಪಿತ್ಥ ಅವಳಿಗೆ ಕಡಿಮೆಯೇನಿರಲಿಲ್ಲ. ಯಾರೋ ಒಬ್ಬರು ಹೊಂದಾಣಿಕೆ ಮಾಡಿಕೊಳ್ಳದಿದ್ದರೆ ಮತ್ತೇನಾಗುತ್ತದೆ? ಕಿಡಿ ಹತ್ತಿಕೊಂಡು ಉರಿಯುತ್ತದೆ.

(ಸಶೇಷ)